ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **354/2021**

| | ಚಾಸಾಃ **3** | ಅಸಾಃ **3** |
|---|---|---|
| ಹೆಸರು | ಸುನೀಲ್ | |
| ತಂದೆಯ ಹೆಸರು : | ಮಲ್ಲೇಶ್ | |
| ವಯಸ್ಸು: | 28 ವರ್ಷ | |
| ಕೆಲಸಃ | ಚಾಲಕ | |
| ವಾಸಸ್ಥಳ | ಬಿದರಿಕೆರೆ ಗ್ರಾಮ | |

ದಿನಾಂಕಃ **27/09/2024.** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ಆರೋಪಿತರು ನನಗೆ ಗೊತ್ತು. ಅವರು ನಮ್ಮ ಗ್ರಾಮದವರು. 1 ಮತ್ತು 2ನೇ ಆರೋಪಿತರು ಲಿಂಗಾಯಿತರು, ಉಳಿದ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ. ಚಾಸಾ-1 ನನ್ನ ತಾಯಿ, ಚಾಸಾ-2 ನನ್ನ ತಮ್ಮ, ಚಾಸಾ-4 ನನ್ನ ತಂದೆ, ಚಾಸಾ-5 ದೊಡ್ಡಪ್ಪ, ಚಾಸಾ-6 ನನ್ನ ಚಿಕ್ಕಪ್ಪನ ಮಗಳು, ಚಾಸಾ-7 ನನ್ನ ತಂದೆಯ ತಂಗಿ, ಚಾಸಾ-8 ರಿಂದ 10 ಚಿಕ್ಕಪ್ಪ ಇರುತ್ತಾರೆ. ಚಾಸಾ-11 ಮತ್ತು 12 ರವರು ನಮ್ಮ ಊರಿನವರು. ನಾನು ಐಟಿಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

2. ಆರೋಪಿತರಿಗೂ ನಮಗೂ ಗಲಾಟೆಯಾಗಿರುತ್ತದೆ. ದಿ. 09.06.2021 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನನಗೆ ಗಲಾಟೆಯ ಬಗ್ಗೆ ಗೊತ್ತಾಗಿರುತ್ತದೆ. ನಾನು ಆಗ ಒಬ್ಬನೇ ಮನೆಯಲ್ಲಿದ್ದೆ. ನನಗೆ ನನ್ನ ಸ್ನೇಹಿತರು ಗಲಾಟೆಯಾಗಿದೆ ಎಂದು ತಿಳಿಸಿದರು. ಆರೋಪಿತರು ನನ್ನ ತಮ್ಮನನ್ನು ಕೊಗ್ಗನಘಟ್ಟದ ಗೇಟಿನ ಹತ್ತಿರದಿಂದ ಹೊಡೆದುಕೊಂಡು ಬಂದು ಊರಿನ ಹತ್ತಿರ ದನಕ್ಕೆ ಚಿಕಿತ್ಸೆ ಕೊಡವ

ಜಾಗದಲ್ಲಿರುವ ಕಂಬಕ್ಕೆ ಕಟ್ಟಿ ಹಾಕಿರುತ್ತಾರೆ. ನಾನು ನನ್ನ ಸ್ನೇಹಿತರು ಹೋಗುವಷ್ಟರಲ್ಲಿ ಊರಿನ ಜನರು ಸೇರಿದ್ದರು. ನನ್ನ ತಾಯಿ ಕೇಳಿರುತ್ತಾರೆ.

3. ನಾನು ನನ್ನ ತಮ್ಮ ತಪ್ಪು ಮಾಡಿದ್ದರೆ ಪೊಲೀಸರಿಗೆ ಒಪ್ಪಿಸಬೇಕಾಗಿತ್ತು, ಯಾಕೆ ಕಟ್ಟಿ ಹಾಕಿದ್ದೀರಾ ಎಂದು ಕೇಳಿದೆ ಅದಕ್ಕೆ 1, 3, 4 ನೇ ಆರೋಪಿತರು ನನಗೂ ಕೂಡ ಕೈಯಿಂದ ನನಗೆ ಬೆನ್ನಿಗೆ ಕೈಗೆ ಕಾಲಿಗೆ ಹೊಡೆದಿರುತ್ತಾರೆ. ನಾನು ಪೊಲೀಸರಿಗೆ ಫೋನ್ ಮಾಡಿ ತಿಳಿಸಿರುತ್ತೇನೆ. ಚಾಸಾ-2 ರವರನ್ನು ಪೊಲೀಸರು ಕರೆದುಕೊಂಡು ಹೋಗುವಾಗ, ಆರೋಪಿತರೆಲ್ಲರೂ ಪೊಲೀಸರ ಮುಂದೆ ನಮ್ಮ ಕುಟುಂಬದರೆಲ್ಲರಿಗೂ ಕೈಯಿಂದ ಹೊಡೆದಿರುತ್ತಾರೆ. ಚಾಸಾ-2 ರವರಿಗೆ ಹೊಡೆಯುವಾಗ ದೊಣ್ಣೆಯಿಂದ ಹೊಡೆದಿರುತ್ತಾರೆ.

4. ಚಾಸಾ-1 ರವರಿಗೆ, 1 ಮತ್ತು 3ನೇ ಆರೋಪಿತರು ಸೂಳೇ ಮುಂಡೆ, ಹೊಲೆಯ ಮುಂಡೇ ಇಂತಹ ಮಗನನ್ನು ಹೆತ್ತಿ ಅವನಿಗೆ ಸಪೋರ್ಟ ಮಾಡಲು ಬಂದಿದ್ದೀಯಾ ಅವನನ್ನು ಕೊಲೆ ಮಾಡುತ್ತೇನೆ ಎಂದು ಸಹಾ ಹೇಳಿದರು. ನನ್ನ ತಂದೆ ತಾಯಿ, ನನ್ನ ತಮ್ಮ, ಚಾಸಾ-6 ರಿಂದ 10 ರವರಿಗೆ ಏಟಾಗಿರುತ್ತದೆ. ಚಾಸಾ-2 ರವರಿಗೆ ಬೆನ್ನಿಗೆ ಸಿಕ್ಕಾಪಟ್ಟೆ ಗಾಯವಾಗಿರುತ್ತದೆ. ಮುಖಕ್ಕೆ ಮತ್ತು ಕಾಲಿಗೆ ಏಟಾಗಿರುತ್ತದೆ. ಅವನ ಕುತ್ತಿಗೆಗೂ ಸಹಾ ಹಗ್ಗ ಹಾಕಿ ಎಳೆದಿರುತ್ತಾರೆ. ಅವನ ಅಲ್ಪಸ್ವಲ್ಪ ಗಾಯವಾಗಿರುತ್ತದೆ.

5. ಎರಡು ದಿನ ಮುಂಚಿತವಾಗಿ ದಿ. 06.06.2021 ರಂದು ಭವಾನಿಯವರ ಮದುವೆ ಇದ್ದು, ಅವರನ್ನು ಕಳುಹಿಸಿ ನಮ್ಮ ಚಿಕ್ಕಪ್ಪ-ಚಿಕ್ಕಮ್ಮ ಬೈಕಿನಲ್ಲಿ ಹೋಗುತ್ತಿದ್ದಾಗ, 1ನೇ ಆರೋಪಿ ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಚಿಕ್ಕಪ್ಪ-ಚಿಕ್ಕಮ್ಮನವರ ಬೈಕು ಬಿದ್ದಿರುತ್ತದೆ. ಅವರು 1ನೇ ಆರೋಪಿಯನ್ನು ಮುಂದೆ ಹೋಗಿ ಕೇಳಿದಾಗ, ಅಲ್ಲಿ ಮಾತಿಗೆ ಮಾತು ಬೆಳೆದು ಜಗಳವಾಗಿರುತ್ತದೆ. ಚಾಸಾ-2 ರವರು ಯಾಕೆ ಹೊಡೆಯುತ್ತಿದ್ದೀರಾ ಎಂದು 1ನೇ ಆರೋಪಿಯನ್ನು ಕೇಳಲು ಹೋದಾಗ, ಅಲ್ಲಿ ಗಲಾಟೆಯಾಗಿರುತ್ತದೆ. ನಾನು ಕೇಳುವಷ್ಟರಲ್ಲಿ 1ನೇ ಆರೋಪಿ ನನಗೆ 2 ಏಟು ಹೊಡೆದಿರುತ್ತಾರೆ.

6. ಚಾಸಾ-2 ರವರು 2ನೇ ಆರೋಪಿಯವರು ಚಾಕುವಿನಲ್ಲಿ ಏಟು ಮಾಡಿರುತ್ತಾರೆ. ನನ್ನ ಚಿಕ್ಕಪ್ಪ 2ನೇ ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು

ಹೋಗಿ ಅವರಿಗೆ ಚಿಕಿತ್ಸೆ ಕೊಟ್ಟಿರುತ್ತಾರೆ. 1ನೇ ಆರೋಪಿ ಚಾಸಾ-2 ರವರ ಮೇಲೆ ದೂರನ್ನು ಕೊಟ್ಟಿರುತ್ತಾರೆ. 2 ದಿನಗಳ ಕಾಲ ಚಾಸಾ-2 ರವರು ಎಲ್ಲಿ ಹೋಗಿದ್ದಾರೆ ಎಂದು ನಮಗೆ ಗೊತ್ತಿರುವುದಿಲ್ಲ. ನಂತರ ನನಗೆ ಫೋನ್ ಮುಖಾಂತರ ಚಾಸಾ-2 ರವರಿಗೆ ಹೊಡೆದುಕೊಂಡು ಬಂದಿರುವ ವಿಚಾರ ಗೊತ್ತಾಗಿರುತ್ತದೆ.

7. ನಂತರ ನಾವು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಸಾಕ್ಷಿ ಮುಮಾ-2 ರಿಂದ 5 ನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಪೊಲೀಸರು ಮಹಜರ್ ಮಾಡಲು ನನ್ನನ್ನು ಕರೆಸಿರುತ್ತಾರೆ. ಚಾಸಾ-2 ರವರನ್ನು ಕಟ್ಟಿ ಹಾಕಿದ್ದ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ಪೊಲೀಸರು ಮುಮಾ-1 ರಿಂದ 5ನ್ನು ಸ್ಥಳದಲ್ಲಿ ಅಮಾನತುಪಡಿಸಿರುತ್ತಾರೆ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಪೊಲೀಸರು ಪೊಟೋ ತೆಗೆದಿರುತ್ತಾರೆ. ಸಾಕ್ಷಿಗೆ ಪೊಟೋವನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಮತ್ತು ಇತರರ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಅ, ರವರು ಬಣ್ಣದ ಪೊಟೋ ಮತ್ತು ಸಿಡಿಯನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಸಿಡಿಯನ್ನು ಬೆರಳಚ್ಚುಗಾರರ ಮುಖಾಂತರ ಹಾಕಿ ನೋಡಿದಾಗ ಅದು ವಿಡಿಯೋ ಸಿಡಿ ಇದ್ದು, ಪೊಟೋ ಇಮೇಜಸ್ ಗಳು ಕಂಡು ಬಂದಿರುವುದಿಲ್ಲ. ಆರೋಪಿತರ ಪರ ವಕೀಲರು ಪೊಟೋ ಇಮೇಜಸ್ ಇಲ್ಲದೇ ಇರುವ ಕಾರಣ ಪೊಟೋ ಗುರುತು ಮಾಡಲು ತಕರಾರು ಮಾಡಿರುತ್ತಾರೆ. ತಕರಾರಿಗೆ ಒಳಪಟ್ಟು, 2 ಬಣ್ಣದ ಪೊಟೋಗಳನ್ನು ಒಟ್ಟಾಗಿ ನಿಪಿ-3 ಎಂದು ಗುರುತಿಸಲಾಯಿತು.

8. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆಯನ್ನು ತಮ್ಮಯ್ಯ ಯಾನೆ ರಾಮಚಂದ್ರ ಬಿಡಿಸಿರುತ್ತಾರೆ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

<u>ಪಾಟೀಸವಾಲುಃ ಎಸ್‌ಪಿಪಿ ರವರಿಂದಃ</u>

9. ಚಾಸಾ-11 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ, ಚಾಸಾ-2 ರವರ ಪರವಾಗಿ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ ವಿ ಜಿ ವಕೀಲರಿಂದಃ</u>

10. ಗಲಾಟೆಯಾದ ವಿಚಾರ ತಿಳಿದಾಗ, ನಾನು ಮತ್ತು ನನ್ನ ಸ್ನೇಹಿತರು ಚಿಕ್ಕಪ್ಪ ದೇವಣ್ಣನ ಮನೆಯಲ್ಲಿದ್ದೆವು. ಗಲಾಟೆಯ ವಿಚಾರ ನನಗೆ ಸುಮಾರು ಸಂಜೆ 5.00 ಗಂಟೆಗೆ ತಿಳಿದಿರುತ್ತದೆ. ಸ್ಥಳಕ್ಕೆ ನಾನು ಮತ್ತು ನನ್ನ ಸ್ನೇಹಿತರು ಒಟ್ಟಿಗೆ ಹೋಗಿರುತ್ತೇವೆ ಅವರ ಹೆಸರು ರಕ್ಷ, ಜಗದೀಶ, ಮಂಜು, ಸತೀಶ್. ನನಗೆ ಗಲಾಟೆ ಬಗ್ಗೆ ತಿಳಿಸಿದ್ದು, ನಮ್ಮ ಊರಿನ ರವಿ ಇರುತ್ತಾರೆ. ಅವರ ತಂದೆ ಹೆಸರು ತಮ್ಮಣ್ಣ. ರವಿ ಅವರು ಇದ್ದಾರೆ. ನಾವುಗಳು ಎಲ್ಲರೂ ಬಂದಾಗಲೂ ಚಾಸಾ-2 ರವರನ್ನು ಕಟ್ಟಿ ಹಾಕಿಕೊಂಡು ಹೊಡೆಯುತ್ತಿದ್ದರು. ಚಾಸಾ-2 ರವರನ್ನು ದಾರದ ಹಗ್ಗದಿಂದ ಕಟ್ಟಿ ಕೈ, ಕಾಲು, ಸೊಂಟ ಹಾಗೂ ಕುತ್ತಿಗೆಗೆ ಕಟ್ಟಿದ್ದರು.

11. ಕಾಲಿಗೆ ಮತ್ತು ಸೊಂಟಕ್ಕೆ ಬಿಗಿಯಾಗಿ ಕಟ್ಟಿದ್ದರು. ಅವನು ನಿಂತಿರುವ ಭಂಗಿಯಲ್ಲಿ ಕಟ್ಟಿರುತ್ತಾರೆ. ಆ ಸಮಯದಲ್ಲಿ ಸುಮಾರು 100 ಜನರು ಊರಿನವರೆಲ್ಲರೂ ಸೇರಿದ್ದರು. ಅವರ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ತಮ್ಮಯ್ಯಣ್ಣನವರು ಹಗ್ಗ ಬಿಚ್ಚಿರುತ್ತಾರೆ. ಹಗ್ಗ ಬಿಚ್ಚಿದಾಗ, ಕುತ್ತಿಗೆಗೆ, ಸೊಂಟಕ್ಕೆ, ಕೈಗೆ, ಕಾಲಿಗೆ ಚಾಸಾ-2 ರವರಿಗೆ ಏಟಾಗಿರುತ್ತದೆ. ಬೆನ್ನಿನಲ್ಲಿ ಮಂಡಿಯಲ್ಲಿ, ಕಾಲಿನಲ್ಲಿ ಚಾಸಾ-2 ರವರಿಗೆ ರಕ್ತ ಬಂದಿರುತ್ತದೆ. ಚಾಸಾ-2 ರವರ ಶರ್ಟ ಮತ್ತು ಪ್ಯಾಂಟಿಗೆ ಸ್ವಲ್ಪ ರಕ್ತವಾಗಿರುತ್ತದೆ.

12. ಶರ್ಟ್ ಬರಿ ನೇತಾಡುತ್ತಿತ್ತು. ನಾನು 2ನೇ ಆರೋಪಿಯನ್ನು ಪ್ರಶ್ನೆ ಮಾಡಿರುತ್ತೇನೆ. ತಮ್ಮಯ್ಯರವರು ನಮ್ಮ ಕೋಮಿನವರಲ್ಲ ಅವರು ಒಕ್ಕಲಿಗರು. ಅವರನ್ನು ಬಿಟ್ಟು ಬೇರೆ ಕೋಮಿನವರು ಬಂದು ಸಮಾಧಾನ ಮಾಡಲು ಪ್ರಯತ್ನ ಪಟ್ಟಿರುವುದಿಲ್ಲ. ಕೊಕ್ಕನಘಟ್ಟ ಗೇಟಿನಿಂದ ಸುಮಾರು 2 ಕಿ.ಮೀ ಇರುತ್ತದೆ. ಈ ವಿಚಾರವನ್ನು ಪೊಲೀಸರ ಮುಂದೆ ಹೇಳಿರುವುದಿಲ್ಲ ಇದೇ ಮೊದಲನೇ ಬಾರಿಗೆ

ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಕೇಳಿರುವ ವಿಚಾರವನ್ನು ಪೊಲೀಸರಿಗೆ ಹೇಳಿರುವುದಿಲ್ಲ ಎಂದರೆ ಸರಿ.

13. ಚಾಸಾ-2 ರವರಿಗೆ ಸ್ಥಳದಲ್ಲಿ ಪ್ರಜ್ಞೆ ಇತ್ತು. ನಾನು ಅವರನ್ನು ಯಾರು ಹೊಡೆದರು ಯಾಕೆ ಹೊಡೆದರು ಎಂದು ಪ್ರಶ್ನೆ ಮಾಡಿರುತ್ತೇನೆ. ಪೊಲೀಸರು ಚಾಸಾ-2 ರವರನ್ನು ಒಬ್ಬನನ್ನೇ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮ ಕುಟುಂಬದವರೆಲ್ಲರೂ ಅವತ್ತೆ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಚಿಕ್ಕಪ್ಪ ಮತ್ತು ಚಿಕ್ಕಮ್ಮ ಬೈಕಿನಿಂದ ಬಿದ್ದಾಗ ಪೆಟ್ಟಾಗಿತ್ತು ಎಂದರೆ ಸರಿ. ಪೊಲೀಸರು ಬಂದಾಗ ನಾನು ಸ್ಥಳದಲ್ಲಿದ್ದೆ. ಗಲಾಟೆಯಾದ ನಂತರ 20-30 ನಿಮಿಷದ ನಂತರ 3 ಜನ ಪೊಲೀಸರು ಬಂದಿರುತ್ತಾರೆ. ಪೊಲೀಸರು ಗಲಾಟೆಗೆ ಕಾರಣ ಕರ್ತರಾದವರನ್ನು ಕರೆದುಕೊಂಡು ಹೋಗಲು ಪ್ರಯತ್ನ ಮಾಡಿರುವುದಿಲ್ಲ. ಸ್ಥಳದಿಂದ ಆರೋಪಿತರನ್ನು ಕರೆದುಕೊಂಡು ಹೋಗಿರುವುದಿಲ್ಲ.

14. ಪೊಲೀಸರಿಗೆ ನಾನು ಮಾಡಿದ್ದೆ, ಪೊಲೀಸರು ಬಂದರು, ನಂತರ ಆರೋಪಿತರು ಪೊಲೀಸರ ಮುಂದೆ ಕೂಡ ನಮ್ಮ ಕುಟುಂಬದವರಿಗೆ ಎಲ್ಲರಿಗೂ ಕೂಡ ಕೈಯಿಂದ ಹೊಡೆದಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. 1 ಮತ್ತು 3 ನೇ ಆರೋಪಿಯವರು ಕೊಲೆ ಬೆದರಿಕೆ ಹಾಕಿರುವ ವಿಚಾರವನ್ನು ನಾನು ಇದೇ ಮೊದಲನೆ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿರುವುದು, ಪೊಲೀಸರು ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಬಲಕಾಲಿಗೆ ಮತ್ತು ಬೆನ್ನಿಗೆ ಏಟಾಗಿರುತ್ತದೆ. ನನಗೆ ರಕ್ತ ಬಂದಿರುವುದಿಲ್ಲ. ನನಗೆ ಬಲಕಾಲಿಗೆ ಮತ್ತು ಬೆನ್ನಿಗೆ ಏಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರ ಕುತ್ತಿಗೆಗೆ ಹಗ್ಗ ಹಾಕಿ ಎಳೆದು ತಂದಿದ್ದು, ಅದರಿಂದ ಕುತ್ತಿಗೆಗೆ ಪೆಟ್ಟಾಗಿದೆ ಎಂಬ ವಿಚಾರವನ್ನು ಇದೇ ಮೊದಲನೇ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರವನ್ನು ಪೊಲೀಸರಿಗೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

15 "ಎರಡು ದಿನ ಮುಂಚಿತವಾಗಿ ದಿ. 06.06.2021 ರಂದು ಭವಾನಿಯವರ ಮದುವೆ ಇದ್ದು, ಅವರನ್ನು ಕಳುಹಿಸಿ ನಮ್ಮ ಚಿಕ್ಕಪ್ಪ-ಚಿಕ್ಕಮ್ಮ ಬೈಕಿನಲ್ಲಿ ಹೋಗುತ್ತಿದ್ದಾಗ, 1ನೇ ಆರೋಪಿ ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಚಿಕ್ಕಪ್ಪ-ಚಿಕ್ಕಮ್ಮನವರ ಬೈಕು ಬಿದ್ದಿರುತ್ತಾರೆ" ಎಂಬ

ವಿಚಾರವನ್ನು ಪೊಲೀಸರಿಗೆ ಹೇಳಿಕೆ ಕೊಟ್ಟಾಗ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅವರು 1ನೇ ಆರೋಪಿಯನ್ನು ಮುಂದೆ ಹೋಗಿ ಕೇಳಿದಾಗ, ಅಲ್ಲಿ ಮಾತಿಗೆ ಮಾತು ಬೆಳೆದು ಜಗಳವಾಗಿರುತ್ತದೆ. ಚಾಸಾ-2 ರವರು ಯಾಕೆ ಹೊಡೆಯುತ್ತಿದ್ದೀರಾ ಎಂದು 1ನೇ ಆರೋಪಿಯನ್ನು ಕೇಳಲು ಹೋದಾಗ, ಅಲ್ಲಿ ಗಲಾಟೆಯಾಗಿರುತ್ತದೆ ಎಂಬ ವಿಚಾರವನ್ನು ಪೊಲೀಸರಿಗೆ ಹೇಳಿಲ್ಲ ಎಂದರೆ ಸರಿಯಲ್ಲ.

16. ಇಂತಹವರೇ ಇಂತಹ ದೊಣ್ಣೆಗಳನ್ನು ಹಿಡಿದಿದ್ದರೂ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮುಮಾ-1 ಹಗ್ಗ ಪ್ಲಾಸ್ಟಿಕ್ ಹಗ್ಗ ಎಂದರೆ ಸರಿ. ಮುಮಾ-1 ರಿಂದ 5 ರ ಮೇಲೆ ಕ್ರೈನಂ ಹಾಗೂ ಸಾಕ್ಷಿಗಳ ಮತ್ತು ತನಿಖಾಧಿಕಾರಿಯವರ ಸಹಿ, ದಿನಾಂಕ ಯಾವುದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಮುಮಾ-1 ರಿಂದ 5 ನ್ನು ಇದೇ ಮೊದಲದನೇ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಇದೇ ವಸ್ತುಗಳನ್ನು ಪೊಲೀಸರು ಆ ದಿನ ಅಮಾನತುಪಡಿಸಿಕೊಂಡರು ಎಂದು ಹೇಳಲು ವಿಶೇಷ ಗುರುತು ಇಲ್ಲ.

17. ಮುಮಾ-2 ಶರ್ಟ್ ಮೇಲೆ ವಿಶೇಷ ಗುರುತು ಇತ್ತಾ ಎಂದರೆ ಗೊತ್ತಿಲ್ಲ. ಮುಮಾ-2 ರ ಮೇಲೆ ರಕ್ತದ ಕಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಾಯಿಗಾಗಲೀ, ಚಾಸಾ-2 ರವರಿಗಾಗಲೀ ಹಲ್ಲೆ ಮಾಡಿಲ್ಲ, ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. ಜಾತಿ ನಿಂದನೆ ಕೇಸು ಹಾಕಿದ ನಂತರ ನಮ್ಮ ಕುಟುಂಬಕ್ಕೆ ಪರಿಹಾರದ ಹಣ ಬಂದಿದೆ ಎಂದರೆ ಸರಿ. ಹಣ ಪಡೆಯಲು ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈ ಘಟನೆಕ್ಕಿಂತ ಮುಂಚಿತವಾಗಿ ನನ್ನ ತಮ್ಮನ ಮೇಲೆ ದೂರು ದಾಖಲಾಗಿರುತ್ತದೆ ಎಂದರೆ ಸರಿ. ಆರೋಪಿತರು ದೂರು ಕೊಟ್ಟ ನಂತರ ನನ್ನ ತಮ್ಮನನ್ನು ದಸ್ತಗಿರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಮ್ಮನ ಮೇಲೆ ಹಲ್ಲೆ ಮಾಡಿದ ನಂತರ ಪೊಲೀಸರು ಕರೆದುಕೊಂಡು ಹೊಗಿರುತ್ತಾರೆ. ಆರೋಪಿತರು ನನ್ನ ತಮ್ಮನ ಮೇಲೆ ದೂರು ದಾಖಲು ಮಾಡಿದ್ದರಿಂದ ನಾವು ಸುಳ್ಳು ದೂರನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

18. ಗಲಾಟೆಯಾದ ದಿನವೇ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಮತ್ತೆ ನಾನು ಯಾವತ್ತು ಪೊಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ಪೊಲೀಸರು ಮದ್ಯಾಹ್ನ 3.00 ಗಂಟೆಗೆ ಸ್ಥಳಕ್ಕೆ ಮಹಜರಿಗೆ ಬಂದಿರುತ್ತಾರೆ. ಮಹಜರಿನಲ್ಲಿ ಬರೆದಿರುವ ವಿಚಾರವನ್ನು ನಾನು ಓದಿರುವುದಿಲ್ಲ. ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯ ತನಕ ಬರೆದರು ಎಂದು ಹೇಳಲು ಆಗುವುದಿಲ್ಲ. ಮಹಜರ್ ಗೆ ನಾನಲ್ಲದೇ, ಮಂಜುನಾಥ ಹಾಗೂ ರಾಜು ಎಂಬುವವರು ಸಾಕ್ಷಿದಾರರಾಗಿ ಸಹಿ ಹಾಕಿರುತ್ತಾರೆ.

19. ಮಹಜರಿನಲ್ಲಿ ದೊಣ್ಣೆಗಳು ಎಲ್ಲಿ ಬಿದ್ದಿತ್ತು ಹಾಗೂ ಬಟ್ಟೆ ಎಲ್ಲಿ ಬಿದ್ದಿತ್ತು ಎಂದು ಬರೆದಿರುತ್ತಾರೆ. ಮಹಜರಿನಲ್ಲಿರುವ ಚೆಕ್ಕುಬಂದಿ ಹೇಳಲು ಗೊತ್ತಿಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರ ಸುಳ್ಳು ನಾನು ಮಹಜರಿಗೆ ಸಹಿಯನ್ನು ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ವೈದ್ಯರಿಗೆ ನಾನು ನನ್ನ ಕಾಲಿಗೆ ಬೆನ್ನಿಗೆ ಏಟಾಗಿರುವ ವಿಚಾರವನ್ನು ಹೇಳಿರುತ್ತೇನೆ. ಆರೋಪಿತರು ಚಾಸಾ-2 ರವರ ಮೇಲೆ ದೂರು ಕೊಟ್ಟಿರುವುದರಿಂದ ನಾವು ಸುಳ್ಳು ದೂರನ್ನು ಕೊಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ